**ದಿನಾಂಕ** 22.09.2021 **ರಂದು ಪ್ರಮಾಣ ವಚನ ಬೋಧಿಸಲಾಯಿತು**.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಂ.ಜೆ.ಜೆ ವಕೀಲರಿಂದ ಎದುರುದಾರ** 1 **ರಿಂದ** 5, 47 **ರಿಂದ** 55 **ರವರ ಪರವಾಗಿಃ**

28. ಈಗ ತೋರಿಸಿದ ಅಟ್ಲಸ್ ನಕಾಶ ನೋಡುತ್ತಿದ್ದೇನೆ . ಅದು ಸಂಪೂರ್ಣ ಸರ್ವೆ ನಂ. 131 ಇದಕ್ಕೆ ಸಂಬಂಧಿಸಿರುತ್ತದೆ. ಅದನ್ನು ನಿಡಿ.45 ಅಂತ ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂ. 131 ರ records of rights ದಾಖಲೆ ನೋಡುತ್ತಿದ್ದೇನೆ. ಅದು ಮೂಲ ಸರ್ವೆ ನಂ. 131 ಕ್ಕೆ ಸಂಬಂಧಿಸಿರುತ್ತದೆ. ಅದನ್ನು ನಿಡಿ.46 ಅಂತ ಗುರುತಿಸಲಾಯಿತು. ಅದರಲ್ಲಿ ಮೊದಲನೆ ಹೆಸರು ಚವುಡ ಬಿನ್ ಚವುಡೇಗೌಡ ಅಂತ ಬರೆಯಲಾಗಿದೆ ಎನ್ನುವುದು ನಿಜ. ಅವರು ನಮ್ಮ ತಾತ ಅನ್ನುವುದು ನಮಗೆ ಗೊತ್ತಿಲ್ಲ. ಏಕೆಂದರೆ ಅದರಲ್ಲಿ ಹೆಸರು ಸರಿಯಾಗಿ ಬರೆದಿಲ್ಲ. ಮೂಲ ಸರ್ವೆ ನಂ. 131 ಇದರ records of rights ನ್ನು ನಾನು ತೆಗೆದುಕೊಂಡು ನೋಡಿರುವುದಿಲ್ಲ. ನಿಡಿ.45 ಅಟ್ಲಸ್ ನಕಾಶ ನೋಡುತ್ತಿದ್ದೇನೆ. ಅದರಲ್ಲಿ ಇನ್ನೊಂದು ಹಾಜರು ಮಾಡಿದ ಜೆರಾಕ್ಸ್ ಅಟ್ಲಸ್ ನಕಾಶೆಯಲ್ಲಿ ಆರೆಂಜ್ ಕಲರ್ ಗುರುತು ಮಾಡಿದ ಸರ್ವೆ ನಂ. 131/9 ಇದು 202 sq. mtr ಇರುತ್ತದೆ ಎನ್ನುವುದು ನಿಜ. ಸದರಿ ಸರ್ವೆ ನಂ. 131/9 ಕ್ಷೇತ್ರ 202 Sq. mtr ಜಾಗವನ್ನು ನಾವು ನಮ್ಮ ತಂದೆ ಎದುರುದಾರ 10 ಪಶುಪತಿ ಇತರೆಯವರು ಕೂಡಿಕೊಂಡು ದಿನಾಂಕ 06.01.2009 ರಂದು ಎದುರುದಾರ 11 ಇವರಿಗೆ ಮಾರಾಟ ಮಾಡಿದ್ದೇವೆ ಅಂತ ಹೇಳುವ ಜಾಗ ಎನ್ನುವುದು ನಿಜ. ಸರ್ವೆ ನಂ. 131/1 ಕ್ಷೇತ್ರ 1465 sq mtr ಅನ್ನು ರಸ್ತೆಗೆ ಸ್ವಾಧೀನ ಪಡಿಸಿಕೊಂಡಿದ್ದಾರೆ. ಸದರಿ ಸರ್ವೆ ನಂ. 131/1 ಕ್ಷೇತ್ರ 1465 sq mtr ಜಾಗ ಇದು ಸರ್ವೆ ನಂ. 131/9 ಕ್ಷೇತ್ರ 202 sq mtr ಜಾಗದಿಂದ 115 ಮೀಟರ್ ದೂರ ಇದೆ ಎನ್ನುವುದು ನಿಜ. ನಿಡಿ.45 ಅಟ್ಲಸ್ ನಕಾಶೆ ಜೊತೆಗೆ ಹಾಜರು ಮಾಡಿದ ಕಲರ್ ದಾಖಲೆಯಲ್ಲಿ ಚಾಕ್‌ಲೇಟ್ ಕಲರ್ ಬಣ್ಣದಲ್ಲಿ 1465 sq mtr ತೋರಿಸಲಾಗಿದೆ ಎನ್ನುವುದು ನಿಜ. ಅದೇ ಜಾಗದಲ್ಲಿ ಶಾಲೆ ಇದೆ. ಅದನ್ನು 53.3 ಅಂತ ತೋರಿಸಿದ್ದಾರೆ. ಸದರಿ 1465 sq mtr ಜಾಗದಲ್ಲಿ ಇದ್ದಂತ ಶಾಲೆ ಕಟ್ಟಡ ಎನ್.ಹೆಚ್ ಅಧಿಕಾರಿಗಳು ಹೊಡೆದು ಹಾಕಿದ್ದಾರೆ ಎನ್ನುವುದು ನಿಜ.

29. ಸರ್ವೆ ನಂ. 131/1 ಕ್ಷೇತ್ರ 1465 sq mtr ಗೆ ಸಂಬಂಧಪಟ್ಟ ಹಾಗೆ ನಾನಾಗಲಿ , ಎದುರುದಾರ 10 ಪಶುಪತಿ, ಅವನ ಹೆಂಡತಿ ಮಕ್ಕಳು ಕೂಡಿಕೊಂಡು ಶಾಲೆ ಅಧಿಕಾರಿಗಳಿಗೆ ಯಾವುದೇ ರೀತಿ ಕ್ರಯ ಪತ್ರ , ದಾನಪತ್ರ ಬರೆದುಕೊಟ್ಟಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ನಿಡಿ.45 ನಕಾಶೆಯಲ್ಲಿ ಪಾಯಿಂಟ್ ನಂ. 53.3 ರಲ್ಲಿ ತೋರಿಸಿದ ಚಾಕ್‌ಲೇಟ್ ಕಲರಿನ ಪೂರ್ವಕ್ಕೆ ನೀಲಿ ಬಣ್ಣದ ಜಾಗ ತೋರಿಸಿದ್ದಾರೆ ಎನ್ನುವುದು ನಿಜ. ಅದನ್ನು ಶೋಭಾ, ರೂಪ ವಿಲ್ಸನ್, ಮಾರ್ಗರೇಟ್, ಲಕ್ಷ್ಮಿ ಪ್ರಸಾದ್ ರವರು ತಮ್ಮ ಹಕ್ಕನ್ನು ಪ್ರತಿಸ್ಥಾಪಿಸಲು ಪ್ರಯತ್ನ ಮಾಡುವ ಜಾಗ ಆಗಿರುತ್ತದೆ. ಅದು ಪಾಯಿಂಟ್ 60.8 ಜಾಗ ಆಗಿರುತ್ತದೆ. ಅದರಲ್ಲಿ ಒಟ್ಟು 1818 sq mtr ಆಗಿರುತ್ತದೆ. ಈಗ ತೋರಿಸಿದ ದಿನಾಂಕ 18.08.1996 ರ ಕ್ರಯಪತ್ರ ನೋಡುತ್ತಿದ್ದೇನೆ. ಅದನ್ನು ನಮ್ಮ ತಂದೆ ಪಶುಪತಿ ಹಾಗೂ ನಮ್ಮ 3 ಜನ ಮಕ್ಕಳ ಪರವಾಗಿ ನಮ್ಮ ತಂದೆ ಪಶುಪತಿ ಇವರು ದೇವರಾಜ ಬಿನ್ ನಂಜಪ್ಪ ಇವರಿಗೆ ಬರೆದುಕೊಟ್ಟಿದ್ದಾರೆ

ಎನ್ನುವುದು ನಿಜ. ಅದು ಸರ್ವೆ ನಂ.131 ರ ಕ್ಷೇತ್ರ 30x40 ಭಾಗದ ಆಸ್ತಿ ಆಗಿರತ್ತದೆ. ಅದನ್ನು ನಿಡಿ.47 ಅಂತ ಗುರುತಿಸಲಾಯಿತು. ಅದೇ ರೀತಿ ಈಗ ತೋರಿಸಿದ ದಿನಾಂಕ 18.08.1996 ರ ಕ್ರಯ ಪತ್ರದ ಕಾಪಿ ನೋಡುತ್ತಿದ್ದೇನೆ. ಅದನ್ನು ಎದುರುದಾರ 10 ಪಶುಪತಿ ಮತ್ತು ನಮ್ಮ 3 ಜನ ಮಕ್ಕಳ ಪರವಾಗಿ ನಮ್ಮ ತಂದೆ ಎಂ.ಕೆ.ಗುಂಡೇಗೌಡ ಇವರಿಗೆ ಸರ್ವೆ ನಂ.131/1 ಕ್ಷೇತ್ರ 60x40 ಕ್ರಯಪತ್ರ ಬರೆದುಕೊಟ್ಟಿದ್ದಾರೆ ಅನ್ನುವುದು ನಿಜ. ಅದನ್ನು ನಿಡಿ.48 ಅಂತ ಗುರುತಿಸಲಾಯಿತು.

**<u>ಪಾಟೀ ಸವಾಲು : ಎದುರುದಾರ 21 ರವರ ಪರವಾಗಿ ಜಗನಾಥ್ ವಕೀಲರಿಂದ :</u>**

ಸರ್ವೆ ನಂ.131/9 ಕ್ಷೇತ್ರ 202 sq mtr ಇದು ಎದುರುದಾರ 21 ವಿವೇಕಾನಂದ ಇವರಿಗೆ ಕರಾರು ಪತ್ರ ಮಾಡಿಕೊಟ್ಟ ಜಾಗ ಎನ್ನುವುದು ನಿಜ. ಸಾಕ್ಷಿ ಹೇಳುತ್ತಾನೆ ಆ ಕರಾರು ಪತ್ರ ರದ್ದು ಮಾಡಿಸಿಕೊಳ್ಳಲಾಗಿದೆ. ಸದರಿ ಸರ್ವೆ ನಂ.131/9 ಕ್ಷೇತ್ರ 2 ಎಕರೆ ಜಮೀನಿಗೆ ಸಂಬಂದಪಟ್ಟ ಹಾಗೆ ಒ.ಎಸ್ 249/2006 ರಲ್ಲಿ ಡಿಕ್ರಿ ಆಗಿದೆ ಎನ್ನುವುದು ನಿಜ. ಅದೇ ಆಸ್ತಿಗೆ ಸಂಬಂಧಪಟ್ಟ ಹಾಗೆ ಆರ್.ಎಸ್.ಎ ಅಪೀಲು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇರುತ್ತದೆ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.